

# ಪೂನಂ ನಶೆ!

ಅತ್ಯಂತ 'ದೂರದೃಷ್ಟಿ'ಯುಳ್ಳ ನಟಿ ಎಂದರೆ ಪೂನಂ ಪಾಂಡೆ ಎಂಬ ಕುಹಕ ಈಗ ಬಾಲಿವುಡ್‌ನ 'ಕೆಂಪುತೋಟ'ದಲ್ಲಿ ಕೇಳಿಬರುತ್ತಿದೆ! ಪೂನಂ 2011ರ ವಿಶ್ವಕಪ್ ಕ್ರಿಕೆಟ್ ಟ್ರೋಫಿಯನ್ನು ಭಾರತ ಗೆದ್ದರೆ ಬೆತ್ತಲಾಗುತ್ತೇನೆಂದು ಪ್ರಚಾರ ಗಿಟ್ಟಿಸಿದ್ದು ನಿಮಗೆ ನೆನಪಿರಬೇಕು. ಅಭಿಮಾನಿಗಳು ಹಲವು ಬಾರಿ ಆಕೆಗೆ ಅದನ್ನು ನೆನಪಿಸಿದರೂ ಕೊಟ್ಟ ಮಾತಿನಂತೆ ಆಕೆ ನಡೆಯಲೇ ಇಲ್ಲ! ಪೂನಂರ ಆ ಹೇಳಿಕೆಯ ಉದ್ದೇಶ ಈಗ ಹೊರಬಿದ್ದಿದೆ. ಪೂನಂ ತಮ್ಮ ಚಿತ್ರದ ಪ್ರಚಾರಕ್ಕಾಗಿ ಎರಡು ವರ್ಷಗಳ ಹಿಂದೆಯೇ ಮಾಡಿದ ಪ್ರಚಾರದ ಗಿಮಿಕ್ ಅದು ಎಂಬ ಜೋಕು ಹರಿದಾಡುತ್ತಿದೆ. ನಿಜ, ಪೂನಂ ನಟಿಸಿದ 'ನಶಾ' ಎಂಬ ಚಿತ್ರ ಬಿಡುಗಡೆಗೆ ಸಿದ್ಧವಾಗುತ್ತಿದೆ. ಶೀರ್ಷಿಕೆಗೆ ತಕ್ಕಂತೆ ನಶೆ ಏರಿಸುವಂತಹ ಚಿತ್ರವಿದು ಎಂದು ಸ್ವತಃ ಪೂನಂ ಹೇಳಿಕೊಂಡಿದ್ದಾರೆ. ಪೂನಂ ಸಿನಿಮಾದಲ್ಲಿ ಸರಸ ಸಲ್ಲಾಪದಲ್ಲಿ ತೊಡಗಿರುವ ದೃಶ್ಯಗಳು ಟ್ರೇಲರ್‌ನಲ್ಲಿ ಪಡ್ಡೆ ಹೈಕಳ ಮೈಬಿಸಿ ಮಾಡುತ್ತಿವೆ. ಪ್ರತಿದಿನವೂ ಜನ ತನ್ನತ್ತ ನೋಡುವಂತಾಗಬೇಕು ಎಂಬ ಬಯಕೆ ತನ್ನಲ್ಲಿರುವುದನ್ನು ಪೂನಂ ಒಪ್ಪಿಕೊಳ್ಳುತ್ತಾರೆ. ಅದಕ್ಕಾಗಿಯೇ ಅವರು ಅಂತರ್ಜಾಲದಲ್ಲಿ ತಮ್ಮ ಮಾದಕ ಭಂಗಿಯ ಬೆತ್ತಲೆ ದೇಹದ ಚಿತ್ರಗಳನ್ನು ಹರಿಬಿಡುತ್ತಿರುವುದು. 'ನಶಾ' ಬೋಲ್ಡ್ ಸಿನಿಮಾ. ಜನ ಅಂತಹ ಸಂಗತಿಗಳನ್ನು ನೋಡಲು ಹೆಚ್ಚು ಇಷ್ಟಪಡುತ್ತಾರೆ ಎನ್ನುವುದು ಪೂನಂ ಮಾತು.

■ ಅಮಿ

